ಪ್ರಯತ್ನಿಸಿದರೂ ವಿಫಲನಾಗಿದ್ದೆ. ಅದು ನಡೆದಿದ್ದು ಹೀಗೆ.

ಒಂದು ದಿನ ಅವಳು ಬರುವ ದಾರಿಯಲ್ಲಿ ನಾನು ಕಾದು ನಿಂತಿದ್ದೆ. ನಾನು ಕಾಯುತ್ತಿದ್ದ ವಿಷಯ ಅವಳಿಗೆ ಗೊತ್ತಿತ್ತೆಂಬುದು ಸ್ಪಷ್ಟ. ನನ್ನನ್ನು ಕಂಡ ಕೂಡಲೇ ಅವಳ ನಡಿಗೆಯ ವೇಗ ಕಡಿಮೆಯಾಗಿತ್ತು. ಸುತ್ತಲೂ ನೋಡಿ ಯಾರೂ ಇಲ್ಲವೆಂದು ಖಚಿತಪಡಿಸುತ್ತಿರುವುದನ್ನು ಗಮನಿಸಿದೆ.

ಅವಳು ನನ್ನ ಸಮೀಪ ಬಂದಳು. ಮೊದಲು ಏನೆಂದು ಮಾತನಾಡಸಲಿ? ನನಗೆ ಕೊಂಚ ಗಾಬರಿಯಾಯಿತು. ಹೆಸರೇನೆಂದು ಕೇಳಲೇ? ಬೇಡ. ಎಲ್ಲಿ ಓದುತ್ತಿರುವುದೆಂದು ಕೇಳಿದರೆ ಸಾಕು. ಅವಳು ಮತ್ತಷ್ಟು ಹತ್ತಿರ ಬಂದಾಗ ನಿಂತಳೆ ಎಂಬ ಅನುಮಾನವುಂಟಾಯಿತು. ಮುಖ ನೋಡುತ್ತಿಲ್ಲ. ಆದರೂ ಏನೋ ಕೇಳಿಸಿಕೊಳ್ಳಲು ತಯಾರಾಗಿ ನಿಂತಂತೆ ತೋರಿತು. ಆದರೆ ನನ್ನ ಗಂಟಲು ಒಣಗುತ್ತಿತ್ತು. ಮಾತುಗಳು ರೆಕ್ಕೆ ಸುಟ್ಟು ಕೆಳಕ್ಕೆ ಬೀಳುತ್ತಿವೆ. ಕಣ್ಮುಚ್ಚಿ ತೆರೆಯುವಷ್ಟರಲ್ಲಿ ತುಟಿಯಂಚಿನಲ್ಲಿ ಒಂದು ಕಿರುನಗೆ ಚೆಲ್ಲುತ್ತಾ ಅವಳು ದೂರವಾಗುತ್ತಿದ್ದಾಳೆ.

ನನ್ನ ಕಣ್ಣುಗಳಿಗೆ ಕತ್ತಲೆ ಕವಿಯಿತು. ನಡೆದು ದೂರವಾಗುತ್ತಿರುವ ಹೆಣ್ಣುಮಗಳು ಹಾಗೂ ಅವಳ ಮುಗುಳ್ನಗು ನನ್ನ ಕಣ್ಣುಗಳಲ್ಲಿ ಅಸ್ತಮಿಸುತ್ತಿವೆ. ಜಡೆಯನ್ನು ಮುಂದಕ್ಕೆ ಹಾಕಿದಳೆ, ಅಥವಾ ಸ್ವಲ್ಪದೂರ ನಡೆದು ಹಿಂದೆ ತಿರುಗಿ ನೋಡಿದಳೆ... ಇಲ್ಲ ನನಗೆ ಯಾವುದೂ ಸ್ಪಷ್ಟವಾಗಿ ಕಾಣಿಸಲಿಲ್ಲ. ಬಹುಶಃ ಅನಿಸಿದ್ದಿರಬೇಕು... ನೆರಳ ನಾಟಕದಂತೆ.

ಅದೇನೇ ಇರಲಿ, ಅವಳು ನಡೆದು ದೂರವಾದಳು. ಕಳೆದುಹೋದ ಬುದ್ಧಿ ಯಾರು ಎಳೆದರೂ ಬರೋದಿಲ್ಲ ಎಂಬಂತೆ ನಾನು ಹಿಂತಿರುಗಿ ನಡೆದೆ. ಹತ್ತಡಿ ಸಂಕದ ಕೆಳಗೆ ದೊಡ್ಡಕಲ್ಲುಗಳು ಕೆಳಬಿದ್ದಾಗ ನೀರು ಸುತ್ತಲೂ ಸಿಡಿಯಿತು. ನನ್ನ ಪರಾಕ್ರಮ ಕಂಡು ಪುಟ್ಟಪುಟ್ಟ ಮೀನುಗಳು ದೂರ ಓಡಿ ಮರೆಯಾದವು.

ಅವಳ ಹೆಸರು, ವಿಳಾಸವನ್ನು ಹುಡುಕುತ್ತಾ ಹೋದೆ. ಹೊಸದಾಗಿ ಈ ಊರಿಗೆ ಯಾರಾದರೂ ಬಂದು ವಾಸವಾಗಿದ್ದಾರೆಯೇ ಎಂದು ವಿಚಾರಿಸಿದೆ. ಇಲ್ಲ... ಅಂತಹವರು ಯಾರೂ ಇಲ್ಲ. ಯಾರದ್ದಾದರೂ ಹೆಂಡತಿಯ ತಂಗಿ ಇಲ್ಲಿ ಓದಲು ಬಂದಿದ್ದಾಳೆಯೇ? ಅದೂ ಇಲ್ಲ. ಹಾಗಾದರೆ ಇವಳು ಯಾರು? ಈ ತನಕ ಕಾಣದಿರುವ ಒಬ್ಬ ಹೆಣ್ಣುಮಗಳು ಹೇಗೆ ಮೊಳಕೆಯೊಡೆದು ಎದ್ದು ಬಂದಳು? ಬಹುಶಃ ಇಲ್ಲಿಯೇ ಗೊಣ್ಣೆ ಸುರಿಸುತ್ತಾ ಓಡಾಡಿದವಳಾಗಿರಬೇಕು.

ಕೊನೆಗೆ ನನಗನ್ನಿಸಿತು, ಅವಳ ಹಿಂದೆ ಹೋಗಲೇ? ಅವಳ ಹಿಂದೆ ಪಡ್ಡೆ ಹುಡುಗನಂತೆ ಹೋಗಿ ಅವಳ ಮನೆಯನ್ನು ಪತ್ತೆಹಚ್ಚುವುದು ಸರಿಯಲ್ಲವೆಂದು ನನಗೆ ತೋರಿತು. ಕೊನೆಗೆ ಹರೀಂದ್ರ ನನ್ನ ನೆರವಿಗೆ ಬಂದ. ಹರೀಂದ್ರನಂತಹವರು ಎಲ್ಲಾ ಊರಿನಲ್ಲಿಯೂ ಕಾಣಸಿಗುತ್ತಾರೆ. ಕೆಲವೊಮ್ಮೆ ಅವರ ಹೆಸರುಗಳು ಬೇರೆ ಇರಬಹುದು ಅಷ್ಟೆ. ಹರೀಂದ್ರ ನಮ್ಮ ಊರಿನ 'ಬಂಡಲ್ ರಾಜ'. ಹಿಂದೆಂದೋ ಊರು ತೊರೆದು ಬೇರೆ ರಾಜ್ಯ, ನಗರಗಳನ್ನೆಲ್ಲಾ ಸುತ್ತಿ, ಕಾಡು ಮೇಡುಗಳನ್ನೆಲ್ಲಾ ಅಲೆದು ಊರಿಗೆ ಮರಳಿದ್ದ ಈ ಹರೀಂದ್ರ. ಅದನ್ನೆಲ್ಲಾ ಅನಂತಣ್ಣನ ಅಂಗಡಿಯ ಪಡಸಾಲೆಯಲ್ಲಿ ಕುಳಿತು ರಂಗುರಂಗಾಗಿ ಹೇಳಿ ಊರವರನ್ನು ಅಚ್ಚರಿಗೊಳಿಸುವುದೇ ಆತನ ಈಗಿನ ಸಾಂಸ್ಕೃತಿಕ ಕಾರ್ಯಕ್ರಮ. ಪ್ರಮುಖವಾದ ಕೆಲಸವೇನೂ ಇಲ್ಲ. ಚಹ ಕುಡಿಯಲು, ಬೀಡಿ ಕೊಳ್ಳಲು ಯಾವಾಗಲಾದರೊಮ್ಮೆ ಸಾರಾಯಿ ಅಂಗಡಿಗೆ ಹೋಗಲಿಕ್ಕೆ ಬೇಕಾದ ಕಾಸನ್ನು ಹೇಗೋ ಸಂಪಾದಿಸುತ್ತಿದ್ದ.

ಹರೀಂದ್ರನ ಕೊಡಗಿನ ಪ್ರವಾಸ ಕೇಳಲು ತುಂಬಾ ಸ್ವಾರಸ್ಯಕರವಾಗಿತ್ತು. ಇಸ್ಪೀಟಿನ 28 ಆಟವನ್ನು ಆಡಲು ಕುಳಿತವರು ತಕ್ಷಣ ತಮ್ಮ ಆಟವನ್ನು ಮರೆತು ಅವನ ಸುತ್ತಲೂ ಸೇರುತ್ತಾರೆ. ಕೊಡಗಿನಲ್ಲಿ ನಿಂಬೆಹಣ್ಣು ಕೊಯ್ಯಲು ಹೋಗಿದ್ದ ಹರೀಂದ್ರ. ಕೊಡಗಿನ ಕಾಡಿನಲ್ಲಿ ಅವನೊಮ್ಮೆ ಒಂಟಿಯಾಗಿಬಿಟ್ಟ. ಕತ್ತಲೆಯಲ್ಲಿ ತಪ್ಪು ತಪ್ಪು ಹೆಜ್ಜೆಗಳನ್ನಿಡುತ್ತಾ ನಡೆದಾಗ ಏನೋ ಒಂದಕ್ಕೆ ತಾಗಿ ಬಿದ್ದುಬಿಟ್ಟ. ಮರದ ರೆಂಬೆಯಲ್ಲಿ ನೇತಾಡುತ್ತಿದ್ದ ಹಾವಿರಬಹುದೆಂದು ಅವನು ಊಹಿಸಿದ. ಬೆಂಕಿಕಡ್ಡಿ ಗೀರಿದ. ಟೊಮೊಟೋದಂತಹ ಹೆಣ್ಣುಮಗಳೊಬ್ಬಳು ತೂಗಾಡುತ್ತಿದ್ದಳು. ಹೆದರಿಕೆಯಾಗಲಿಲ್ಲ. ಯಾರೋ ಕೊಂದು ತೂಗು ಹಾಕಿರಬೇಕು. ಹರೀಂದ್ರ ಮತ್ತೆ ಅಲ್ಲಿ ನಿಲ್ಲಲಿಲ್ಲ. ಒಂದೇ ಓಟ.

ಹತ್ತನೆಯ ಇಯತ್ತೆಗೆ ಬಂದಾಗ ಊರು ಸುತ್ತುವ ವ್ಯಾಮೋಹ ಹುಟ್ಟಿಕೊಂಡಿತು. ಅದಕ್ಕೆ ಅನುಮತಿಯೂ ದೊರೆಯಿತು. ಹಾಗೆ ನಾನು ಕೂಡ ಹರೀಂದ್ರನ ಶ್ರೋತೃವಾದೆ. ಅವನು ಸಕಲಕಲಾವಲ್ಲಭನಾಗಿದ್ದ. ಮೂಗಿನ ಮೂಲಕ ಹೊಗೆ ಬಿಡುತ್ತಾನೆ. ವರ್ತುಲ ವರ್ತುಲವಾಗಿಸಿ ಗಾಳಿಯಲ್ಲಿ ತೇಲಿಬಿಡುತ್ತಾನೆ. ಕಣ್ಣುಗಳ ಚಲನೆಯಿಂದ ಕಿವಿಗಳನ್ನು ಕಂಪಿಸುವಂತೆ ಮಾಡುತ್ತಾನೆ.

ಹರೀಂದ್ರ ನನಗಿಂತಲೂ ನಾಲ್ಕು ವರ್ಷ ದೊಡ್ಡವನು. ಅವನು ಇಪ್ಪತ್ತೈದು ಮೈಲಿಗಳಾಚೆಗಿರುವ ಪೇಟೆಗೆ ಹೋಗಿ ಅಲ್ಲಿನ ಲಾಡ್ಜ್‌ನಲ್ಲಿ ಹೆಣ್ಣನ್ನು ವಿಚಾರಿಸುತ್ತಾ ಹೋಗುತ್ತಾನಂತೆ. ಉಷ್ಣದ ಹುಣ್ಣುಗಳು ಇದೆಯೇ ಎಂದು ಅರಿಯಲು ನಿಂಬೆಹಣ್ಣನ್ನು ಕತ್ತರಿಸಿ ಕೈಯಲ್ಲಿಟ್ಟುಕೊಳ್ಳುತ್ತಾನೆ. ಅದನ್ನು ಕಂಡಾಗ ಹುಣ್ಣಿರುವ ಹೆಣ್ಣುಗಳು ಓಡಿಬಿಡುತ್ತಾರಂತೆ.

ನಾನು ಬಹಳ ಸಂಕೋಚದಿಂದಲೇ ವಿಷಯ ತಿಳಿಸಿದೆ. ಆದರೆ ಅದನ್ನು ಕೇಳಿಸಿಕೊಂಡಕೂಡಲೇ ಅವನಿಗೂ ಹುಚ್ಚು ಹಿಡಿಯಿತು. ಅವನು ಸ್ವಲ್ಪ ಹೊತ್ತು ಕಣ್ಣುಗಳನ್ನು ಮುಚ್ಚಿದ. ಮೆದುಧ್ವನಿಯಲ್ಲಿ ಪಿಸುನುಡಿದ. ಹದಿನಾಲ್ಕುಹದಿನೈದು ವರ್ಷ. ಮುಂದೆ ಎರಡು ಜಡೆಗಳು ಅನಂತರ ಆತ ನಾಲ್ಕು ಬೆರಳುಗಳನ್ನು ಎತ್ತಿ ತೋರಿಸಿದ. ಮುಖ್ಯರಸ್ತೆ ಮತ್ತು ಪಂಚಾಯ್ತಿರಸ್ತೆಯ ಅಂಚಿನ ನಡುವೆ ಅಂತಹ ನಾಲ್ಕು ಹೆಣ್ಣುಮಕ್ಕಳಿದ್ದಾರೆ. ಅದರಲ್ಲಿ ಯಾವುದು? ಪುನಃ ಆತ ಧ್ಯಾನಾಸಕ್ತನಾದ. ಅದರ ನಂತರ ಪ್ರಶ್ನೆಗಳು ಬಂದವು.

'ಕಪ್ಪಾ, ಬಿಳುಪಾ?'

'ಕಪ್ಪಲ್ಲ, ಬಿಳುಪಲ್ಲ.'

'ಎತ್ತರದ್ದ, ಕುಳ್ಳಗಿನದ್ದಾ?'

'ಎತ್ತರವೂ ಇಲ್ಲ, ಕುಳ್ಳಗೂ ಇಲ್ಲ.'

'ಕಿವಿಯಲ್ಲಿ ಲೋಲಕ್ಕು ಇದೆಯೆ?'

'ಇದೆ.'

'ಹಸಿರು ರೇಷ್ಮೆ ಲಂಗದ ಕೆಳ ಅಂಚಿಗೆ ಹಳದಿ ಬಣ್ಣವಲ್ಲವೇ?'

'ಹೌದು.'

'ಬಲಗಣ್ಣಿನ ಕೆಳಗೆ ಕಪ್ಪು ಮಚ್ಚೆಯಿಲ್ಲವೇ?'

'ಇದೆ.'

'ಸಿಕ್ಕು.'

ಹರೀಂದ್ರನ ಮುಖ ಉತ್ಸಾಹದಿಂದ ಅರಳಿತು.

ನಾನು ಆತಂಕಕ್ಕೊಳಗಾದೆ. ಹರೀಂದ್ರ ಮಾತನಾಡುತ್ತಿಲ್ಲ. ಕಳ್ಳನಗು ಸೂಸಿ ನನ್ನತ್ತ ನೋಡುತ್ತಿದ್ದಾನೆ. ನನ್ನ ಆತಂಕ ಎದೆಬಡಿತವಾಗಿ ಬದಲಾಗುತ್ತಿದೆ. ಕೊನೆಗೆ ಅವನು ಗಂಟುಬಿಚ್ಚಿದ.

'ದೊಡ್ಡ... ವೇಲಾಯುಧನ ಮಗಳು ವೀಣಾ. ಒಂಭತ್ತರ ಇಯತ್ತೆ. ನೀನು ಓದುವ ಶಾಲೆಯಲಲ್ಲ ಅವಳು ಓದುತ್ತಿರುವುದು. ಪೇಟೆಯ ಗರ್ಲ್ಸ್ ಸ್ಕೂಲಿನಲ್ಲಿ. ಈ ತನಕ ಅಮ್ಮನ ಮನೆಯಿಂದ ಸ್ಕೂಲಿಗೆ ಹೋಗುತ್ತಿದ್ದಳು. ಇತ್ತೀಚೆಗೆ ಅವಳು ತಂದೆ ಮನೆಯಲ್ಲೇ ವಾಸ. ಮುಂದಿನ ವರ್ಷ ನಿನ್ನ ಶಾಲೆಗೆ ಬರಬಹುದು. ಆದರೆ ಒಂದು ಸಮಸ್ಯೆ ಇದೆ...'

'ಏನು ಸಮಸ್ಯೆ?'

'ಅವಳಿಗೆ ಡಬ್ಬಲ್ ಲಪ್ಪು (ಲವ್)'

'ಹಾಗಂದ್ರೆ?'

'ಷಂಸುದ್ದೀನ್ ಮತ್ತು ರಾಜೇಂದ್ರ ಇಬ್ಬರೂ ನಿನ್ನ ಸ್ಕೂಲಿನ ಕಳ್ಳರು. ಅವರಿಬ್ಬರು ಒಗ್ಗಟ್ಟಾಗಿ ಅವಳನ್ನು ಲಪ್ಪು ಮಾಡಲು ತೊಡಗಿದ್ದಾರೆ. ಷಂರಾಜನ್ ಎಂದು ಎರಡು ಹೆಸರು ಸೇರಿಸಿ ಒಂದು ಹೆಸರು ಮಾಡಿ ಲಪ್ಪು.'

ಲವ್' ಎಂಬುದಕ್ಕೆ ಹರೀಂದ್ರ ಲಪ್ಪು ಎಂದು ಹೇಳಿದ್ದ.

ನಿಜ! ಷಂಸುದ್ದೀನ್ ಮತ್ತು ರಾಜೇಂದ್ರ ನನ್ನ ಶಾಲೆಯಲ್ಲಿಯೇ ಓದುತ್ತಿದ್ದಾರೆ. ಶಾಲೆಯ ಶೆಡ್ಡಿನ ಗೋಡೆಗಳ ಮೇಲೆಲ್ಲಾ ಷಂರಾಜ್ ಎಂದು ಬರೆದಿಡಲಾಗಿದೆ. ಷಂರಾಜ್ + ವೀಣಾ ಎಂದು ಕಂಡಿದ್ದು ನೆನಪಾಗುತ್ತಿದೆ.

'ಅದೆಲ್ಲಾ ಬಿಡು. ನಾವು ಅವಳನ್ನು ಕೆಡವೋಣ.' ನಾವು ಎಂಬ ಬಹುವಚನ ನನಗೆ ಇಷ್ಟವಾಗಲಿಲ್ಲ. ಆದರೂ ಸದ್ಯಕ್ಕೆ ಅವನ ಮಾತಿಗೆ ಒಪ್ಪಿಕೊಂಡೆ.

'ಮೊದಲು ಒಂದು ಪತ್ರ ಬರೆಯಬೇಕು' ಹರೀಂದ್ರ ಹೇಳಿದ.

'ಚೆನ್ನಾಗಿರುವ ಒಂದು ಪ್ರೇಮಲೇಖನ.'

ನಿಶೆಯ ನೀರವದಲ್ಲಿ ಭಾವನೆಗಳನ್ನು ಹರಿಯ ಬಿಟ್ಟು ಬೆಳದಿಂಗಳಿನಿಂದ ಮಿನುಗಿಸಿದ ಕಾಗದದಲ್ಲಿ ಒಂದು ಪ್ರೇಮಲೇಖನ ನಾನು ಬರೆದೆ. ಮತ್ತೆ ಮತ್ತೆ ಓದಿ ತಿದ್ದಿ ತೀಡಿದೆ. ಆರನೆಯ ಪ್ರತಿ ಅದ್ಭುತವೆನಿಸಿತು.

(ಸಶೇಷ)